## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಯೋ(1) ಮು.ಯೋ.ಕಾ.ಹ.ಬಿ. 02/2009-10 ದಿನಾಂಕ:30.4.2009

### ಜ್ಞಾಪನಾ

**ವಿಷಯ:** 2009-10ನೇ ಸಾಲಿಗೆ ಶಿಕ್ಷಣ ಇಲಾಖೆಯ ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡಿ ಹಣ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರಿ ಆದೇಶದ ಸಂಖ್ಯೆ: ಇಡಿ 76 ಯೋಯೋಕ 2009 ಬೆಂಗಳೂರು ದಿನಾಂಕ: 28.4.2009 (ಇಡಿ 58 ಸ್ವೀಮರ(ಯೂನಿಕ್)2009, ದಿನಾಂಕ: 28.4.2009)

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ 2009-10ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

| ಸರ್ಕಾರಿ ಆದೇಶದಲ್ಲಿನ ಕ್ರ.ಸಂ. | ಕಾರ್ಯಕ್ರಮ/ಉಪಕಾರ್ಯಕ್ರಮದ ಹೆಸರು ಹಾಗೂ ಲೆಕ್ಕ ಶೀರ್ಷಿಕೆ | ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮ | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) | ಅನುಷ್ಠಾನಾಧಿಕಾರಿಗಳು |
|---|---|---|---|---|
| 1 (1) | ಪರಿವೀಕ್ಷಣೆ (ಪ್ರಾಥಮಿಕ) 2202-01-104-0-00-059 | ಜಿಲ್ಲಾ ಉಪನಿರ್ದೇಶಕರುಗಳ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಗಳಿಗೆ ಕಂಪ್ಯೂಟರ್, ಸ್ಟೇಷನರಿ, ಮುಂತಾದವುಗಳ ಖರೀದಿಗಾಗಿ | 20.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 1(2) | ಪರಿವೀಕ್ಷಣೆ (ಪ್ರಾಥಮಿಕ 2202-01-104-0-00-059 | 2008-09ನೇ ಸಾಲಿನಲ್ಲಿ ವಿಭಜನೆಯಾದ 6 ದೊಡ್ಡ ರೇಂಜ್‌ಗಳಲ್ಲಿ ಪ್ರತಿ ರೇಂಜ್‌ಗೆ ನಾಲ್ಕು ಹುದ್ದೆಗಳಂತೆ (ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆ, ಪತ್ರಾಂಕಿತ ವ್ಯವಸ್ಥಾಪಕರು, ಸಿಸಿಟಿ ಮತ್ತು ಡಿ ಗ್ರೂಪ್ ಹುದ್ದೆಗಳಿಗೆ) ಒಟ್ಟು 24 ಹುದ್ದೆಗಳಿಗೆ ವೇತನ ಹಾಗೂ ಇತರೆ ಖರ್ಚುಗಳಿಗಾಗಿ | 40.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು |
| 2 | ವಿದ್ಯಾವಿಕಾಸ 2202-01-109-0-03<br>221- 2500.00 ಲಕ್ಷ<br>422- 2500.00 ಲಕ್ಷ<br>423- 500.00 ಲಕ್ಷ | 2009-10ನೇ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಒಟ್ಟು 62.63 ಲಕ್ಷ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಒಂದು ಜೊತೆ ಉಚಿತ ಸಮವಸ್ತ್ರ ಒದಗಿಸುವ ಕಾರ್ಯಕ್ರಮವನ್ನು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕಾಗಿ ಬಳಸಿ ಅನುಷ್ಠಾನಗೊಳಿಸಲು | 5500.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 3(1) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–059 | ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ಶೈಕ್ಷಣಿಕ ಚಟುವಟಿಕೆಗಳಿಗಾಗಿ | 20.00 | ನಿರ್ದೇಶಕರು (ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು. |
| 3(2) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35<br>059 – 100.00 ಲಕ್ಷ<br>422 – 100.00 ಲಕ್ಷ | ಪ್ರೌಢಶಾಲಾಭಿವೃದ್ಧಿ ಯೋಜನೆಯಡಿಯಲ್ಲಿ ಪ್ರೌಢಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. | 200.00 | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 3(3) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35<br>002– 1.13 ಲಕ್ಷ<br>011– 0.43 ಲಕ್ಷ<br>014– 0.21 ಲಕ್ಷ | ಪತ್ರಾಂಕಿತ ವ್ಯವಸ್ಥಾಪಕರ ವೇತನ ವೆಚ್ಚಗಳಿಗಾಗಿ (ಮಧ್ಯಾಹ್ನ ಉಪಹಾರ ಯೋಜನೆ) | 1.77 | ಸಹ ನಿರ್ದೇಶಕರು, ಎಂ.ಎಂ.ಎಸ್ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3 (4) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–195 | ವಾಹನ ವೆಚ್ಚಗಳಿಗಾಗಿ ಎಂ.ಎಂ.ಎಸ್. | 1.23 | ಸಹ ನಿರ್ದೇಶಕರು, ಎಂ.ಎಂ.ಎಸ್ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3 (5) | ಸಾರ್ವತ್ರಿಕ್ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–059 | ಎಂ.ಎಂ.ಎಸ್.ಕೇಂದ್ರ ಕಾರ್ಯಾಲಯದ ವೆಚ್ಚಗಳಿಗಾಗಿ | 19.50 | ಸಹ ನಿರ್ದೇಶಕರು, ಎಂ.ಎಂ.ಎಸ್ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3(6) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–<br>059– 32.80 ಲಕ್ಷ<br>422–100.00 ಲಕ್ಷ<br>423–100.00 ಲಕ್ಷ | 1. ಚೈತ್ರದ ಚಿಗುರು ಹಾಗೂ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳನ್ನು ಕ್ಲಸ್ಟರ್, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಏರ್ಪಡಿಸಲು. | 227.50 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

| | | | | |
|---|---|---|---|---|
| 3(7) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು<br>2202-01-800-1-35-059- 154.70 ಲಕ್ಷ<br>422- 100.00 ಲಕ್ಷ | 1. ರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸಲು<br>2. ಕ್ರೀಡಾಪಟುಗಳ ರಾಜ್ಯ/ರಾಷ್ಟ್ರಮಟ್ಟದ ತರಬೇತಿಗಾಗಿ.<br>3. ಶಾಲೆಗೆ ಕ್ರೀಡಾ ಉಪಕರಣಗಳನ್ನು ಕೊಳ್ಳಲು<br>4. ಪ್ರತಿ ತಾಲ್ಲೂಕಿನಲ್ಲಿ ಮೇಲಾಟದ 200 ಮೀ.ಓಟದ ಕ್ರೀಡಾಂಗಣ ಸೌಲಭ್ಯ ಒದಗಿಸಲು.<br>5. ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಕ್ರೀಡಾ ಪಟ್ಟುಗಳಿಗೆ ಬಹುಮಾನ ನೀಡಲು.<br>6. ದೈಹಿಕ ಶಿಕ್ಷಣಾಧಿಕಾರಿ/ಶಿಕ್ಷಕರಿಗೆ ಕ್ರೀಡಾ ಅಧ್ಯಯನ ಪ್ರವಾಸಕ್ಕಾಗಿ<br>7. ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ವಿದ್ಯಾರ್ಥಿ ನಿಲಯ ಕಟ್ಟಡಕ್ಕಾಗಿ.<br>8. ಯೋಗ ಶಿಕ್ಷಣಕ್ಕಾಗಿ | 254.70 | ನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 3(8) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು<br>2202-01-800-1-35-059 | 1. ಸರ್ಕಾರಿ ಉಪಾಧ್ಯಾಯರ ತರಬೇತಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕಾಗಿ – ರೂ.73.00 ಲಕ್ಷಗಳು.<br>2. ಸರ್ಕಾರಿ ಉಪಾಧ್ಯಾಯರ ತರಬೇತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು – ರೂ.37.00 ಲಕ್ಷಗಳು<br>3. ಡಿ.ಎಸ್.ಇ.ಆರ್.ಟಿ.ಯ ವಿಭಾಗದ ಸೆರಿಕ್ ಲೈಬ್ರರಿಯ ನಿರ್ವಹಣೆಗಾಗಿ ರೂ. 5.00 ಲಕ್ಷಗಳು.<br>4. ಡಿ.ಎಸ್.ಇ.ಆರ್.ಟಿ.ಯ ಹಾಸ್ಟೆಲ್ ನಿರ್ವಹಣೆಗಾಗಿ–ರೂ.10.00 ಲಕ್ಷಗಳು.<br>5. ಎನ್.ಟಿ.ಎಸ್.ಇ./ಎನ್.ಎಂ.ಎಂ.ಎಸ್. ಪರೀಕ್ಷೆ ನಿರ್ವಹಣೆಗಾಗಿ –ರೂ.10.00 ಲಕ್ಷಗಳು.<br>6. ಮೌಲ್ಯ ಮಾಪನ ಸಂಪನ್ಮೂಲ ಪುಸ್ತಕ –ರೂ.5.00 ಲಕ್ಷಗಳು.<br>ಒಟ್ಟು ರೂ.140.00 ಲಕ್ಷಗಳು | 140.00 | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಹೊಸಕೆರೆ ಹಳ್ಳಿ, ಬೆಂಗಳೂರು. |
| 3(9) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು<br>2202-01-800-1-35-059 | ಇ–ಆಡಳಿತ ಕಾರ್ಯಕ್ರಮದಡಿ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್ ವೇರ್ ಖರೀದಿಗಾಗಿ<br>1.ಆಯುಕ್ತರ ಕಛೇರಿಗೆ ಕಂಪ್ಯೂಟರ್ ಮತ್ತು ಪರಿಕರಗಳು<br>2.ಉಪನಿರ್ದೇಶಕರ ಕಛೇರಿಗಳಿಗೆ ಕಂಪ್ಯೂಟರ್ ಮತ್ತು ಪರಿಕರಗಳು. | 100.00 | ಸಹ ನಿರ್ದೇಶಕರು(ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 3(10) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–059 | ಇ.ಎಂ.ಐ.ಎಸ್. ಚಟುವಟಿಕೆಗಳಿಗಾಗಿ ಎಂ.ಹೆಚ್.ಆರ್.ಡಿ.ದೆಹಲಿ ಇವರ ವತಿಯಿಂದ 2009–10ನೇ ಸಾಲಿಗೆ ಡೈಸ್ ತಂತ್ರಾಂಶವನ್ನು ನಿಡುತ್ತಿದ್ದು ಅದನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನಗೊಳಿಸಲು. | 50.00 | ಸಹ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. |
| 3(11) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–059 | ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಲು ಬಿತ್ತಿ ಪತ್ರ, ಕರಪತ್ರಗಳನ್ನು ಹೊರತರಲು, ಸಭೆಗಳನ್ನು ಆಯೋಜಿಸಲು ಕರ್ನಾಟಕ ವಾರ್ತಾ ಇಲಾಖಾ ಮೂಲಕ ಪತ್ರಿಕೆಗಳಿಗೆ ಜಾಹೀರಾತು ನೀಡುವುದು, ರೇಡಿಯೋ, ಟಿ.ವಿ. ಕಾರ್ಯಕ್ರಮಗಳು, ಕಿರುಚಿತ್ರ ತಯಾರಿಕೆ, ಇತರೆ ಮಾಧ್ಯಮಗಳ ಮುಖಾಂತರ ಇಲಾಖಾ ಕಾರ್ಯಕ್ರಮಗಳ ಪ್ರಚಾರ ಮಾಡುವುದು | 200.00 | ಸಹ ನಿರ್ದೇಶಕರು, ಶಾಲಾ ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. |
| 3(12) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202–01–800–1–35–059 | ಅಕ್ಷರ ದಾಸೋಹ ಕಾರ್ಯಕ್ರಮದ ಮೌಲ್ಯಮಾಪನ ಮಾಡಿಸಲು (ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಭರಿಸಲು) | 40.00 | ಸಹ ನಿರ್ದೇಶಕರು, ಎಂ.ಎಂ.ಎಸ್ ಸಾ.ಶಿ.ಇ ಬೆಂಗಳೂರು |
| 4 | ಸರ್ವ ಶಿಕ್ಷಣ ಅಭಿಯಾನ ಸಮಿತಿ ಶೇ.40 ರ ರಾಜ್ಯ ಪಾಲು ಭರಿಸಲು 2202–01–800–1–44–059– 7000.00 ಲಕ್ಷ 422–5000.00 ಲಕ್ಷ 423–3000.00 ಲಕ್ಷ | 2009–10 ಸಾಲಿಗೆ ಶೇ.40 ರಷ್ಟು ರಾಜ್ಯದ ಪಾಲಿನ ವೆಚ್ಚ ಭರಿಸಲು (ಕೇಂದ್ರ ಸರ್ಕಾರದಿಂದ ಅದರ ಪಾಲಿನ ಅನುದಾನ ಬಿಡುಗಡೆಯಾಗುವುದನ್ನು ಖಚಿತಪಡಿಸಿಕೊಂಡು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ನಿಗಧಿತವಾದ ಅನುದಾನವನ್ನು ಅದೇ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು) | 15000.00 | ರಾಜ್ಯ ಯೋಜನಾ ನಿರ್ದೇಶಕರು (ಎಸ್.ಎಸ್.ಎ)ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. |
| 5 | ಬ್ಲಾಕ್ ಮತ್ತು ಕ್ಲಸ್ಟರ್ ರಿಸೋರ್ಸ್ ಸೆಂಟರ್‌ಗಳು. 2202–01–800–1–41–059 | ಡಿ.ಪಿ.ಇ.ಪಿ. ಅಡಿಯಲ್ಲಿನ 16 ಜಿಲ್ಲೆಗಳಲ್ಲಿ ಮಂಜೂರಾಗಿರುವ ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳಡಿಯ 1882 ಹುದ್ದೆಗಳನ್ನು ಮುಂದುವರೆಸಿ ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿಸಲು ಹಾಗೂ ಈ ಬಗ್ಗೆ ಪ್ರತ್ಯೇಕವಾಗಿ ಲೆಕ್ಕ ಪತ್ರಗಳನ್ನಿಡಲು ಮತ್ತು ಹುದ್ದೆಗಳ ವಿವರಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 3200.00 | ರಾಜ್ಯ ಯೋಜನಾ ನಿರ್ದೇಶಕರು (ಎಸ್.ಎಸ್.ಎ) ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. |

| | | | | |
|---|---|---|---|---|
| 6(1) | ಪುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2202–01–800–1–13–059 | ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆ | 500.00 | ನಿರ್ದೇಶಕರು, ಕೆ.ಎಸ್.ಇ.ಇ.ಬಿ. ಬೆಂಗಳೂರು. |
| 6(2) | ಪುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2202–01–800–1–13–059 | ಲೇಖನ ಸಾಮಗ್ರಿಗಳ ಖರೀದಿ ಹಾಗೂ ಪುಸ್ತಕಗಳ ಸಗಟು ಖರೀದಿಗಾಗಿ ( ಹೊಸ ಶಾಲೆಗಳು ಸೇರಿದಂತೆ) | 100,00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 7 | ಕುವೆಂಪು ಮಾದರಿ ಶಾಲೆಗಳು 2202–01–800–1–72<br>059–50.00<br>422–20.00<br>423–10.00 ಲಕ್ಷಗಳು | ರಾಜ್ಯದಲ್ಲಿ ಈಗಾಗಲೇ ಆರಿಸಿರುವ 32 ಕುವೆಂಪು ಮಾದರಿ ಶಾಲೆಗಳಲ್ಲಿ ಬಾಕಿ ಇರುವ ಚಟುವಟಿಕೆಗಳಿಗಾಗಿ ಹಾಗೂ ನಿರ್ವಹಣೆಗಾಗಿ ಪ್ರತಿ ಶಾಲೆಯ ಅಗತ್ಯಕ್ಕೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಲು | 80.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 8(1) | ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ನಿರ್ದೇಶನ ಮತ್ತು ಆಡಳಿತ 2202–02–001–0–03<br>051–14.00<br>052–1.50<br>059–24.50 | 1.ಸಾಮಾನ್ಯ ವೆಚ್ಚಗಳು, ಕಛೇರಿ ಸಾದಿಲ್ವಾರು, ಆಫೀಸ್ ಆಟೋಮೇಷನ್ ಗಾಗಿ ಹಾಗೂ ಕಛೇರಿ ಆಧುನೀಕರಣ ಕ್ಕಾಗಿ.<br>2. ಆಯುಕ್ತರ ಆಪ್ತ ಕಾರ್ಯದರ್ಶಿ ಮತ್ತು ಉಪನಿರ್ದೇಶಕರು, ಯೋಜನಾ ಶಾಖೆ, ಪ್ರೌಢ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಅಂಕಿ ಅಂಶ ಹಾಗೂ ಸಂಸ್ಕೃತ ರವರ ನಿವಾಸದ ದೂರವಾಣಿ ವೆಚ್ಚಕ್ಕಾಗಿ.<br>3.ಆಯುಕ್ತರ ಕಛೇರಿ ಯಂತ್ರೋಪಕರಣ ಗಳ ನಿರ್ವಹಣಾ ವೆಚ್ಚಕ್ಕಾಗಿ ಒಟ್ಟು= | 14.00<br>1.50<br>19.50<br>35.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 8(2) | ಸಾರ್ವಜನಿಕ ಶಿಕ್ಷಣ ಆಯುಕ್ತರು, ನಿರ್ದೇಶನ ಮತ್ತು ಆಡಳಿತ 2202–02–001–0–03–059 | ಆಯುಕ್ತರ ಕಛೇರಿ ಯೋಜನಾ ಶಾಖೆಯ ಸಭೆಗಳ ನಿರ್ವಹಣೆಯ ವೆಚ್ಚಗಳಿಗಾಗಿ | 5.00 | ಉಪನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 11(1) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–059–10.00ಲಕ್ಷ | 1. ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ 2009–10ರ ಪುಸ್ತಕಗಳನ್ನು ಮುದ್ರಿಸಿ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ ಸರಬರಾಜು ಮಾಡಲು ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರಗತಿ ಪತ್ರ ಮುದ್ರಿಸಲು | 3.968<br>6.032 | ನಿರ್ದೇಶಕರು (ಡಿ.ಎಸ್.ಇ.ಆರ್.ಟಿ.) ಬೆಂಗಳೂರು ಮತ್ತು ವ್ಯವಸ್ಥಾಪಕ ನಿರ್ದೇಶಕರು. ಪಠ್ಯಪುಸ್ತಕಸಂಘ, ಬೆಂಗಳೂರು |
| 11(2) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–041 | 2. ಮೈಸೂರು ಮತ್ತು ಬೆಳಗಾಂ ವಿಭಾಗೀಯ ಸಹ ನಿರ್ದೇಶಕರುಗಳ ಕಾರ್ಯಾಲಯಗಳ ಪ್ರಯಾಣ ವೆಚ್ಚಗಳಿಗಾಗಿ | 12.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 11(3) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–051 | 3. ಮೈಸೂರು/ಬೆಳಗಾಂ ವಿಭಾಗೀಯ ಸಹ ನಿರ್ದೇಶಕರ ಕಾರ್ಯಾಲಯಗಳ ಸ್ಟೇಷನರಿ, ಸಾದಿಲ್ವಾರು ವೆಚ್ಚಗಳಿಗಾಗಿ | 8.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 11(4) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–059 | 4. ಆಯುಕ್ತರ ಕಾರ್ಯಾಲಯದ ಕಂಪ್ಯೂಟರ್, ಯು.ಪಿ.ಎಸ್. ಜೆರಾಕ್ಸ್ ಯಂತ್ರಗಳ ನಿರ್ವಹಣೆ, ಜೆರಾಕ್ಸ್ ಯಂತ್ರಗಳ ಖರೀದಿ ಮತ್ತು ಅಗತ್ಯ ಸ್ಟೇಷನರಿ ಖರೀದಿಗಾಗಿ | 30.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 12 | ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ 2202–02–800–1–01–422– 200.00<br>423– 100.00 | ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಕೊಳ್ಳುವ ಪ.ಜಾತಿ/ಪ.ಪಂಗಡದ ಎಲ್ಲಾ ಮಕ್ಕಳು ಹಾಗೂ ಇತರೆ ಹೆಣ್ಣುಮಕ್ಕಳ ಪರೀಕ್ಷಾ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕಾಗಿ | 300.00 | ನಿರ್ದೇಶಕರು, ಕ.ಪ್ರೌ.ಶಿ.ಪ. ಮಂ.ಬೆಂಗಳೂರು |
| 13 (1) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ(ನಬಾರ್ಡ್) 2202–02–800–1–10–059 | 1. ಅತೀ ಅವಶ್ಯವಿರುವ ನಗರ ಪ್ರದೇಶದ ಕಟ್ಟಡ ರಹಿತ ಸರ್ಕಾರಿ ಪ್ರೌಢಶಾಲೆಗಳಿಗೆ ಅಗತ್ಯ ಕೊಠಡಿಗಳನ್ನು ನಿರ್ಮಿಸಲು | 300.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 13(2) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ(ನಬಾರ್ಡ್) 2202–02–800–1–10–059 | 2. ಜಿಲ್ಲಾ ಉಪನಿರ್ದೇಶಕರುಗಳ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಗಳ ಕಟ್ಟಡಗಳ ನಿರ್ಮಾಣ ಮತ್ತು ಅಗತ್ಯ ದುರಸ್ತಿಗಾಗಿ | 250.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 13(3) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ(ನಬಾರ್ಡ್) 2202–02–800–1–10–059 | ಭೂಸ್ವಾಧೀನಕ್ಕಾಗಿ | 50.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 14 | 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್ ನೀಡಿಕೆ 2202-02-800-1-12 059- ರೂ.5500.00 ಲಕ್ಷ 422- ರೂ.3000.00 ಲಕ್ಷ 423- ರೂ.1500.00 ಲಕ್ಷ | ಈ ಕಾರ್ಯಕ್ರಮಕ್ಕೆ 2009-10 ನೇ ಸಾಲಿಗೆ ನಿಗಧಿಯಾಗಿರುವ ಅನುದಾನದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಪಾರದರ್ಶಕ ಕಾಯ್ದೆ ಪ್ರಕಾರ ಉಚಿತ ಬೈಸಿಕಲ್ ವಿತರಿಸುವ ಹಾಗೂ ಪತ್ರಿಕಾ ಪ್ರಕಟಣೆ ವೆಚ್ಚ ಮತ್ತು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಗೆ ತರಬೇತಿ ಸಭೆಗಳ ವೆಚ್ಚಗಳಿಗಾಗಿ ರೂ.10.00 ಲಕ್ಷ ಗಳನ್ನು ಭರಿಸಿ ಕಾರ್ಯಕ್ರಮವನ್ನು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲು | 10000.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 15(1) | ಪಂಚ ಸೌಲಭ್ಯ 2202-01-800-1-73 059-100.00 ಲಕ್ಷ 422-50.00 ಲಕ್ಷ | 2009-10ನೇ ಸಾಲಿಗೆ ನಗರ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಡೆಸ್ಕ್‌ಗಳು, ಗ್ರಂಥಾಲಯ, ವಿಜ್ಞಾನ ಉಪಕರಣಗಳು ಮುಂತಾದ ಸೌಲಭ್ಯ ಒದಗಿಸುವ ಕಾರ್ಯಕ್ರಮವನ್ನು ವಿಶೇಷ ಘಟಕ ಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ಹಂಚಿಕೆ ಮಾಡುವ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 150.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 15(2) | ಪಂಚ ಸೌಲಭ್ಯ 2202-01-800-1-73 059-100.00 ಲಕ್ಷ 422-50.00 ಲಕ್ಷ | 2009-10ನೇ ಸಾಲಿಗೆ ನಗರ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಡೆಸ್ಕ್‌ಗಳು, ಗ್ರಂಥಾಲಯ, ವಿಜ್ಞಾನ ಉಪಕರಣಗಳು ಮುಂತಾದ ಸೌಲಭ್ಯ ಒದಗಿಸುವ ಕಾರ್ಯಕ್ರಮವನ್ನು ವಿಶೇಷ ಘಟಕ ಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿ ಹಂಚಿಕೆ ಮಾಡುವ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 150.00 | ನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 16 | ಯೋಜನಾ ಕಾರ್ಯಗಳ ಘಟಕ 2202–01–800–1–04–059 | 2009–10ನೇ ಸಾಲಿಗೆ ನಿಗಧಿಯಾಗಿರುವ ಅನುದಾನದ ಮಿತಿಯೊಳಗೆ 100 ನಿರ್ವಹಣಾ ಅಭಿವೃದ್ಧಿ ಸುಗಮಕಾರರ(ಎಂ.ಡಿ.ಎಫ್) ಪ್ರಮಾಣೀಕರಣ, 96 ಶಾಲಾ ನಿರ್ವಹಣಾ ಅಭಿವೃದ್ಧಿ ಸುಗಮಕಾರರ(ಎಸ್.ಎಲ್.ಡಿ.ಎಫ್) ಪ್ರಮಾಣೀಕರಣ, ನಮ್ಮ ಶಾಲೆ ಕಾರ್ಯಕ್ರಮದಡಿಯಲ್ಲಿ 75 ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ವ್ಯಕ್ತಿತ್ವ ವಿಕಸನ ಮತ್ತು ನಾಯಕತ್ವದ ಕುರಿತು ತರಬೇತಿ ನೀಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು. | 200.00 | ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿ, ಪೂರಕ ಕಟ್ಟಡ, ಬೆಂಗಳೂರು. |
| 17(1) | ಸರ್ಕಾರಿ ಪ್ರೌಢಶಾಲಾ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಸರ್ಕಾರೇತರ ಶುಲ್ಕಗಳ ಮರುಪಾವತಿಗಾಗಿ (ಶಾಲಾಬ್ಯಾಗ್, ನೋಟ್ ಪುಸ್ತಕ) 2202–02–800–1–06<br>422 ರೂ.1300.00 ಲಕ್ಷ<br>423 ರೂ. 400.00 ಲಕ್ಷ<br>ರೂ.1700.00 ಲಕ್ಷ | 1.ಸರ್ಕಾರಿ ಶಾಲೆಗಳಲ್ಲಿ ಒಂದರಿಂದ ಐದನೇತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ವರ್ಗದ ಮಕ್ಕಳಿಗೆ ಶಾಲಾಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಿಸುವ ಮತ್ತು ಆರರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ವರ್ಗದ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ಎಸ್.ಡಿ.ಎಂ.ಸಿ.ಗಳ ಮೂಲಕ ಅನುಷ್ಠಾನಗೊಳಿಸಲು. | 1700.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 17(2) | ಸರ್ಕಾರಿ ಪ್ರೌಢಶಾಲಾ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಸರ್ಕಾರೇತರ ಶುಲ್ಕಗಳ ಮರುಪಾವತಿಗಾಗಿ (ಶಾಲಾಬ್ಯಾಗ್, ನೋಟ್ ಪುಸ್ತಕ) 2202–02–800–1–06<br>422 ರೂ.200.00 ಲಕ್ಷ<br>423 ರೂ. 100.00 ಲಕ್ಷ<br>ರೂ.300.00 ಲಕ್ಷ | 2008–09ನೇ ಸಾಲಿನಿಂದ ಪರಿಹಾರ ಬೋಧನೆ ಹಾಗೂ ವಿಶೇಷ ತರಗತಿಗಳಿಗೆ ಒತ್ತು ನೀಡಿರುವ ಹಿನ್ನೆಲೆಯಲ್ಲಿ ಪ.ಜಾತಿ/ಪ.ವರ್ಗದ ಮಕ್ಕಳಿಗೆ ಜಾಮಿಟ್ರಿ ಬಾಕ್ಸ್ ಮತ್ತು ಕಿಂಗ್ ಸೈಜ್ ನೋಟ್ ಪುಸ್ತಕಗಳನ್ನು ವಿತರಿಸುವ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಲು | 300.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 18(1) | ಅತೀ ವಿಶಿಷ್ಟ ಸೇವೆಗಾಗಿ ಉತ್ತೇಜನ ನೀಡಿಕೆ 2202–02–800–1–11–117 | ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಕೆ.ಎಸ್.ಕ್ಯೂ.ಎ.ಒ. ನಡೆಸಿದ ಶಾಲಾ ಗುಣಮಟ್ಟ ಮೌಲ್ಯಾಂಕನ ವರದಿಯ ಆಧಾರದ ಮೇಲೆ ಪ್ರತಿ ಕ್ಲಸ್ಟರ್‌ನಲ್ಲಿ ಅತಿ ಹೆಚ್ಚು ಶೈಕ್ಷಣಿಕ ಸಾಧನೆ ಮಾಡಿದ ಒಂದು ಪ್ರಾಥಮಿಕ ಶಾಲೆಯನ್ನು ಗುರುತಿಸಿ ಆ ಶಾಲೆಯ ಶಿಕ್ಷಕರಿಗೆ ಬಹುಮಾನ ನೀಡುವ ಕಾರ್ಯಕ್ರಮ ಅನುಷ್ಠಾನಗೊಳಿಸಲು. | 100.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 18(2) | ಅತೀ ವಿಶಿಷ್ಟ ಸೇವೆಗಾಗಿ ಉತ್ತೇಜನ ನೀಡಿಕೆ 2202–02–800–1–11–117 | ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಪೈಕಿ 2009 ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.5 ರಷ್ಟು ಅತಿ ಹೆಚ್ಚು ಫಲಿತಾಂಶ ಪಡೆದ ಶಾಲೆಗಳನ್ನು ಗುರ್ತಿಸಿ ಅವುಗಳಿಗೆ ಉತ್ತೇಜನ ನೀಡಲು ಹಾಗೂ 2008–09ನೇ ಸಾಲಿನಲ್ಲಿ ಗಳಿಸಿದ ಶೇಕಡವಾರು ಫಲಿತಾಂಶಕ್ಕೆ ಹೋಲಿಸಿದಾಗ 2009 ರ ಮಾರ್ಚ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಶೇಕಡವಾರು ಹೆಚ್ಚಳ ಸಾಧಿಸಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶೇ.5 ರಷ್ಟು ಶಾಲೆಗಳನ್ನು ಗುರ್ತಿಸಿ ಅವುಗಳಿಗೆ ಉತ್ತೇಜನ ನೀಡುವ ಕಾರ್ಯಕ್ರಮ ಅನುಷ್ಠಾನಗೊಳಿಸಲು. | 100.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 19 | ಮಾಸ್ತಿ ವೆಂಕಟೇಶ ಅಯ್ಯಂಗಾರ್ ಶಾಲೆ 2202–80–800–0–32–059 | ಮಾಲೂರು ತಾಲ್ಲೂಕು ಮಾಸ್ತಿಯಲ್ಲಿನ ಸರ್ಕಾರಿ ವಸತಿ ಪ್ರೌಢಶಾಲೆಯ ವಸತಿ ವಿಭಾಗದ ನಿರ್ವಹಣಾ ವೆಚ್ಚಗಳನ್ನು (ಹೆಚ್ಚುವರಿ ಸಿಬ್ಬಂದಿ ವೇತನಗಳೂ ಸೇರಿದಂತೆ) ಭರಿಸುವ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲು. | 40.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 20 | ಸೈನಿಕ ಶಾಲೆ, ಕೂಡಿಗೆ, ಕೊಡಗು ಜಿಲ್ಲೆ. 4202–01–202–1–04–386 –400.00 ಲಕ್ಷ 2202–02–107–5–00–059– 150.00 | ಸೈನಿಕ ಶಾಲೆಯ ಕಟ್ಟಡ ನಿರ್ಮಾಣ ಮಾಡಲು ಹಾಗೂ ಸೈನಿಕ ಶಾಲೆ ಕೂಡಿಗೆಯ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸಲು. | 550.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 21 | ಸಮೂಹ ಶಾಲಾ ಸಂಕೀರ್ಣ 2202–01–800–1–74–059 | ಸುಮಾರು 2500 ಕ್ಲಸ್ಟರ್‌ಗಳಿಗೆ ಸಂಬಂಧಿಸಿದಂತೆ ಕ್ಲಸ್ಟರ್ ಸಹಾಯಕ ಶಿಕ್ಷಣಾಧಿಕಾರಿಗಳ ಕಾರ್ಯಾಲಯಗಳ ಸಾದಿಲ್ವಾರು ಹಾಗೂ ಪ್ರವಾಸ ಭತ್ಯೆಗಳನ್ನು ಭರಿಸುವ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 500.00 | ನಿರ್ದೇಶಕರು (ಪ್ರಾಥಮಿಕಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 22 | ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ನು ಅಳವಡಿಸುವ ಬಗ್ಗೆ 2202–80–800–0–34–059 | 1. ರೂ.150.00 ಲಕ್ಷಗಳ ಮಿತಿಯಲ್ಲಿ ಹಿಂದುಳಿದ 44 ಬ್ಲಾಕ್‌ಗಳಲ್ಲಿ ದೈಹಿಕ ಶಿಕ್ಷಣ ಅಭಿವೃದ್ಧಿಗೊಳಿಸಲು. ಮತ್ತು 2. ರೂ.50.00 ಲಕ್ಷಗಳ ವೇತನ ವೆಚ್ಚಗಳನ್ನು ಭರಿಸುವ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 200.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

| | | | | |
|---|---|---|---|---|
| 23(1) | ಶಿಕ್ಷಣದಲ್ಲಿ ಸಹಾಯಾನುದಾನ 2202–80–800–0–35–101– 400–00ಲಕ್ಷ | ಅನುದಾನಕ್ಕೆ ಒಳಪಡಿಸಿದ ಖಾಸಗಿ ಪ್ರೌಢಶಾಲೆಗಳ ಶಾಲಾಶಿಕ್ಷಕರಿಗೆ ವೇತನ ಭರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 400.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 23(2) | ಶಿಕ್ಷಣದಲ್ಲಿ ಸಹಾಯಾನುದಾನ 2202–80–800–0–35–101– 100–00ಲಕ್ಷ | ಅನುದಾನಕ್ಕೆ ಒಳಪಡಿಸಿದ ಖಾಸಗಿ ಪ್ರಾಥಮಿಕ ಶಾಲೆಗಳ ಶಾಲಾಶಿಕ್ಷಕರಿಗೆ ವೇತನ ಭರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 100.00 | ನಿರ್ದೇಶಕರು (ಪ್ರಾಥಮಿಕಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 24 | 39 ಹಿಂದುಳಿದ ತಾಲ್ಲೂಕುಗಳಲ್ಲಿ ಸಮೂಹ ಸಂಕೀರ್ಣ ನಿರ್ಮಾಣ (ಶಿಕ್ಷಕರ ವಸತಿ ಗೃಹ){SDP} 4202–01–201–1–03–133 | ಡಾ:ನಂಜುಂಡಪ್ಪ ವರದಿ ಆಧಾರದ ಮೇಲೆ ಹಿಂದುಳಿದ 39 ತಾಲ್ಲೂಕುಗಳಲ್ಲಿ ಶಿಕ್ಷಕರ ಸಮೂಹ ವಸತಿ ಗೃಹ ನಿರ್ಮಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 1600.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 25 | ಸರ್ವ ಶಿಕ್ಷಣ ಅಭಿಯಾನ 2ನೇ ಯೋಜನಾ ಪೂರ್ವ ಚಟುವಟಿಕೆಗಳು 2202–02–800–9–04–059 | ಸರ್ವ ಶಿಕ್ಷಣ ಅಭಿಯಾನ 2ನೇ ಯೋಜನಾ ಪೂರ್ವ ಚಟುವಟಿಕೆಗಳ ಕಾರ್ಯಕ್ರವನ್ನು ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿರುವುದನ್ನು ಖಚಿತಪಡಿಸಿಕೊಂಡು ಅನುಷ್ಠಾನಗೊಳಿಸಲು | 1000.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 26 | ವಿದ್ಯಾರ್ಥಿ ಆಧಾರಿತ ಸಹಾಯಾನುದಾನ ಪದ್ಧತಿ ಸಹಾಯಾನುದಾನ 2202–01–800–1–76–101 | ಈ ಕಾರ್ಯಕ್ರಮಕ್ಕೆ ಆರ್ಥಿಕ ಇಲಾಖೆಯ ಅನುಮೋದನೆಯನ್ನು ಕಡತದ ಮೇಲೆ ಪಡೆದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 100.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 27 | ವಿದ್ಯಾರ್ಥಿ ವೇತನಗಳು ಮತ್ತು ಸೆಮಿನಾರ್‌ಗಳು(ಸಂಸ್ಕೃತ ಶಿಕ್ಷಣ) 2202–05–103–0–05–059 | 1. ವಿದ್ಯಾರ್ಥಿ ವೇತನಕ್ಕಾಗಿ | 100.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| | | 2. ಸಂಸ್ಕೃತ ಕಾಲೇಜುಗಳಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗೆ | | |
| | | 3. ನಾಲ್ಕು ವಿಭಾಗಗಳಲ್ಲಿ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ತರಬೇತಿ ನೀಡಲು | | |
| | | 4. ಸರ್ಕಾರಿ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಇಲ್ಲಿ ಗೋಷ್ಠಿ ಏರ್ಪಡಿಸಲು | | |
| | | 5. ಮೈಸೂರು, ಬೆಂಗಳೂರು ಗೋಕರ್ಣ ಸರ್ಕಾರಿ ಸಂಸ್ಕೃತ ಕಾಲೇಜುಗಳ ನಿರ್ವಹಣೆಗಾಗಿ. | | |

| | | | | |
|---|---|---|---|---|
| | | 6. ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಸ್ಪರ್ಧೆಯನ್ನು ಏರ್ಪಡಿಸಲು | | |
| | | 7. ರಾಜ್ಯದಲ್ಲಿರುವ 235 ಅನುದಾನಿತ ಪಾಠಶಾಲೆಗಳಿಗೆ ಮತ್ತು 9 ಅನುದಾನಿತ ಸಂಸ್ಕೃತ ಕಾಲೇಜುಗಳಿಗೆ ತಲಾ ರೂ.5000/- ದಂತೆ ಗ್ರಂಥಾಲಯಕ್ಕಾಗಿ ಪುಸ್ತಕಗಳನ್ನು ಖರೀದಿಸಲು | | |
| | | 8. ಇತರೆ ಅಂಗೀಕೃತ ವೆಚ್ಚಗಳಿಗಾಗಿ | | |
| 28 | ಹಿಂದಿಯೇತರ ರಾಜ್ಯಗಳಲ್ಲಿ ಹಿಂದಿ ಶಿಕ್ಷಕರ ನೇಮಕ 2202-05-102-0-03-059 | ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿದ್ದು 2009-10ನೇ ಸಾಲಿಗೆ ಟೋಕನ್ ಅನುದಾನವಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 50.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 29 | ಸಂಸ್ಕೃತ ಶಿಕ್ಷಣ ಅಭಿವೃದ್ಧಿಗಾಗಿ ಕೇಂದ್ರ ವಲಯ ಯೋಜನೆ 2202-05-103-0-20-101 | ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು 2009-10ನೇ ಸಾಲಿಗೆ ಟೋಕನ್ ಅನುದಾನವಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಕಾರ್ಯಕ್ರಮ ಅನುಷ್ಠಾನಗೊಳಿಸಲು | 40.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 30 | ಅಂಗವಿಕಲ ಮಕ್ಕಳಿಗೆ ಸಮಗ್ರ ಶಿಕ್ಷಣದ ಕೇಂದ್ರ ಪುರಸ್ಕೃತ ಯೋಜನೆ 2202-80-800-0-18-059 | 2009-10ನೇ ಸಾಲಿಗೆ ರಾಜ್ಯದ ಮುಂದುವರೆದ ಯೋಜನೆಯಡಿ 20 ಡಯಟ್ ಕಾಂಪೋನೆಂಟ್, 7 ಎನ್.ಜಿ.ಓ.ಗಳಿಂದ, 5 ಸಂಪನ್ಮೂಲ ಶಿಕ್ಷಕರುಗಳ ವೇತನ ಬಾಕಿಯೂ ಸೇರಿದಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಲು. | 6.00 | ನಿರ್ದೇಶಕರು (ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು. |

**ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳ ವಿಲೇವಾರಿಯಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿದೆ.**

1. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಸರ್ಕಾರಿ ಆದೇಶದಲ್ಲಿ ವಿಧಿಸಿರುವ ನಿಬಂಧನೆಗಳನ್ವಯ ಅನುಷ್ಠಾನಗೊಳಿಸಲು ತಿಳಿಸಿದೆ. ಹಾಗೂ ಪ್ರತಿ ಮಾಹೆ ಆರ್ಥಿಕ ಹಾಗೂ ಬೌತಿಕ ಪ್ರಗತಿಯ ವರದಿಯನ್ನು ಯೋಜನಾ ಶಾಖೆಗೆ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಎಂ.ಎಂ.ಆರ್. ವರದಿಗಾಗಿ ತಪ್ಪದೆ ಕಳುಹಿಸುವುದು.
2. ಕಾರ್ಯಕ್ರಮಗಳ ಮುಂದೆ ನಮೂದಿಸಿರುವ ಹಣದ ಮಿತಿಯೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಯಾವುದೇ ಕಾರಣಕ್ಕೂ ನಿಗದಿಗೊಳಿಸಿರುವ ಹಣಕ್ಕಿಂತ ಹೆಚ್ಚು ವೆಚ್ಚ ಭರಿಸಬಾರದೆಂದು ತಿಳಿಸಿದೆ. ಹಾಗೂ ಸದರಿ ಮೊತ್ತವನ್ನು ಅನುಮೋದಿತ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳಲು ಸೂಚಿಸಿದೆ.
3. ಉಲ್ಲೇಖದ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
4. ಖರೀದಿಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟು ನಿಟ್ಟಾಗಿ ಪಾಲಿಸಲು ತಿಳಿಸಿದೆ.
5. ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ, ಇ-ಗವರ್ನೆನ್ಸ್ ಇಲಾಖೆಯು ಸೂಚಿಸಿರುವಂತೆ ಕ್ರಿಯಾ ಯೋಜನೆಗೆ ರಾಜ್ಯಮಟ್ಟದ ಉನ್ನತಾಧಿಕಾರಿ ಸಮಿತಿಯ ಮತ್ತು ಟ್ಯಾಪ್ ಸಮಿತಿಯ ಅನುಮೋದನೆ ಪಡೆಯತಕ್ಕದ್ದು.

6. ಕ್ರಮ ಸಂಖ್ಯೆ (4) ರಲ್ಲಿನ ಸರ್ವ ಶಿಕ್ಷಣ ಅಭಿಯಾನ ಸಮಿತಿಯ ಕೇಂದ್ರ ಕಾರ್ಯಾಲಯ ಮತ್ತು ರಾಜ್ಯ ಮಟ್ಟದಲ್ಲಿ ಭರಿಸಬೇಕಾದ ವೆಚ್ಚಗಳ ಶೇಕಾ 40 ರಷ್ಟು ರಾಜ್ಯದ ಪಾಲನ್ನು ಕೇಂದ್ರ ಸರ್ಕಾರದಿಂದ ಶೇಕಡಾ 60 ರಷ್ಟು ಹಣ ಬಿಡುಗಡೆಯಾದಂತೆ ರಾಜ್ಯದ ಪಾಲನ್ನು ಡ್ರಾ ಮಾಡುವ ಅಧಿಕಾರವನ್ನು ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಸಮಿತಿ ಇವರಿಗೆ ಅನುಮೋದನೆ ನೀಡಿದೆ.
7. ಕ್ರಮ ಸಂಖ್ಯೆ 3(1) ರಲ್ಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು 2009–10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮವಾರು ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಹಾಗೂ ಕಾರ್ಯಕ್ರಮಗಳಿಗೆ ಬೇಕಾದ ಅನುದಾವನ್ನು ಹಂಚಿಕೆ ಮಾಡಿಕೊಂಡು ಅನುಷ್ಠಾನಗೊಳಿಸತಕ್ಕದ್ದು.
8. ಕ್ರಮ ಸಂಖ್ಯೆ 8(1) ರಲ್ಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಉಪಕಾರ್ಯಕ್ರಮಗಳವಾರು ತಿಳಿಸಲಾಗಿರುವ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.
9. ಕೇಂದ್ರ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆಗಳಡಿ ಕೇಂದ್ರ ಸರ್ಕಾರವು 2009–10ನೇ ಸಾಲಿಗೆ ಕಾರ್ಯಕ್ರಮಗಳನ್ನು ಮುಂದುವರೆಸಿರುವುದನ್ನು ಮತ್ತು ಆಯವ್ಯಯದ ಹಣ ಒದಗಿಸಿಕೊಂಡಿರುವುದನ್ನು ಮತ್ತು ಹಣದ ಬಿಡುಗಡೆಯನ್ನು ಖಚಿತಪಡಿಸಕೊಂಡು ಕಾರ್ಯಕ್ರಮಗಳನ್ನು ಮುಂದುವರೆಸಿ ಅನುಷ್ಠಾನಗೊಳಿಸತಕ್ಕದ್ದು.
10. ಕ್ರಮ ಸಂಖ್ಯೆ: 28 ಮತ್ತು 29ನೇ ಕೇಂದ್ರ ವಲಯ ಯೋಜನಾ ಕಾರ್ಯಕ್ರಮಗಳ ಮುಂದೆ ನಮೂದಿಸಿರುವ ಹಣದ ಮಿತಿಯೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮುನ್ನ ಕೇಂದ್ರ ಸರ್ಕಾರದಿಂದ ಹಣ ಬಂದಿರುವುದನ್ನು ಖಚಿತಪಡಿಸಕೊಂಡು ಕಡತದ ಮೇಲೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆದ ನಂತರವೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಷರತ್ತನ್ನು ವಿಧಿಸಿದೆ.
11. ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡುವಾಗ ಜಿಲ್ಲೆಗಳ ಅವಶ್ಯಕತೆಗನುಗುಣವಾಗಿ ಅನುದಾನವನ್ನು ಹಂಚಿಕೆ ಮಾಡುವುದು ಹಾಗೂ ಜಿಲ್ಲೆಗಳಿಂದ ಕೊರತೆ ಅನುದಾನದ ಪ್ರಸ್ತಾವನೆಗಳಿಗೆ ಅವಕಾಶ ನೀಡದಂತೆ ನೋಡಿಕೊಳ್ಳುವುದು. ಹಂಚಿಕೆ ಮಾಡಿದ ಮೊತ್ತಕ್ಕಿಂತ ಹೆಚ್ಚಿಗೆ ಭರಿಸಕೂಡದೆಂದು ಸೂಚಿಸಲು ತಿಳಿಸಿದೆ.
12. ಜಿಲ್ಲೆಯ ಉಪನಿರ್ದೇಶಕರುಗಳಿಗೆ/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಲಾಗುವ ಮೊತ್ತವನ್ನು ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು–1 ಇಲ್ಲಿಗೆ ಖಜಾನೆ ಗಣಕೀಕರಣ ಮಾಡಲು ಕ್ರಮ ಕೈಗೊಳ್ಳುವುದು. ಡಿಡಿಓ ಕೋಡ್ ಸಮೇತ ON LINE ಗಣಕೀಕರಣ ಮಾಡದೇ ಇದ್ದ ಪಕ್ಷದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಖಜಾನೆಗಳಲ್ಲಿ ಡ್ರಾ ಮಾಡಿಕೊಳ್ಳಲು ಕಷ್ಟ ಸಾಧ್ಯವಾಗುತ್ತದೆ. ಆದ್ದರಿಂದ ಈ ಕ್ರಮವನ್ನು ತಪ್ಪದೇ ಕೈಗೊಳ್ಳಲು ಹಾಗೂ ಜಿಲ್ಲೆಯ ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ತಿಳಿಸಿದೆ.
13. ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮದ ಅನುಷ್ಠಾನ ಕುರಿತು ಕಛೇರಿ ಜ್ಞಾಪನವನ್ನು ನೀಡದ ಹೊರತು ಅನುದಾನವನ್ನು ಆನ್ ಲೈನ್ ಗಣಕೀಕರಣಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನಲ್ಲಿ ಅಪ್ ಲೋಡ್ ಮಾಡಲು ಅವಶ್ಯಕವಾಗಿ ಬೇಕಾಗಿರುವ ಅನುಷ್ಠಾನಾಧಿಕಾರಿಗಳು ಡಿಡಿಓ ಗಳಿಗೆ ಹೊರಡಿಸಿದ ಕಛೇರಿ ಜ್ಞಾಪನದ ಪ್ರತಿಯನ್ನು ಯೋಜನಾ ಶಾಖೆಯ ಉಪನಿರ್ದೇಶಕರಿಗೆ ತ್ರಿಪ್ರತಿಗಳಲ್ಲಿ ಕಡ್ಡಾಯವಾಗಿ ಕಳುಹಿಸಿಕೊಡಲು ತಿಳಿಸಿದೆ.
14. ಅನುಷ್ಠಾನಾಧಿಕಾರಿಗಳು ತಮ್ಮ ಕಛೇರಿ ಜ್ಞಾಪನದಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ/ತಾಲ್ಲೂಕು ಖಜಾನೆಗಳಲ್ಲಿ ಯಾವ ಬಿಲ್ಲಿನಲ್ಲಿ ಹಣ ಸೆಳೆಯಬೇಕು, ಮೇಲು ಸಹಿ ಅಗತ್ಯವಿದ್ದಲ್ಲಿ ಯಾರಿಂದ ಮೇಲು ಸಹಿ ಪಡೆಯಬೇಕು, ಯಾರಿಗೆ ಹಣ ಬಿಡುಗಡೆ ಮಾಡಬೇಕು, ಯಾರು ಹಣ ಸೆಳೆಯಬೇಕು ಎಂಬ ವಿವರಗಳನ್ನು ಸ್ಪಷ್ಟವಾಗಿ ತಿಳಿಸಿರಬೇಕು.
15. ಆಯವ್ಯಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆನ್‌ಲೈನ್ ಗಣಕೀಕರಣಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸುವುದು ಹಾಗೂ ಬಿಲ್ಲುಗಳ ಹಣ ಸೆಳೆಯುವ ಬಗ್ಗೆ ವೈಯಕ್ತಿಕವಾಗಿ ನಿಗಾ ವಹಿಸತಕ್ಕದ್ದು.
16. 2009–10ನೇ ಸಾಲಿನಲ್ಲಿ ಹೊಸ ಆಯವ್ಯಯದಲ್ಲಿ ಯೋಜನಾ ಕಾರ್ಯಕ್ರಮಗಳಡಿಯಲ್ಲಿಯ ಮುಂದುವರೆದ ಯೋಜನೆಗಳಿಗೆ ಮಾಡುವ ವೆಚ್ಚವನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಫ್.ಡಿ. 6 ಬಿಪಿಇ 2009, ಬೆಂಗಳೂರು ದಿನಾಂಕ:31ನೇ ಮಾರ್ಚ್ 2009 ರ

ಆದೇಶದಲ್ಲಿ ತಿಳಿಸಿದಂತೆ 2009–10ನೇ ಸಾಲಿನ ಲೇಖಾನುದಾನದ ಮಿತಿಯೊಳಗೆ 1ನೇ ಏಪ್ರಿಲ್ 2009 ರಿಂದ 31ನೇ ಜುಲೈ 2009 ರವರೆಗೆ ಮಾತ್ರ ವೆಚ್ಚದ ಮಿತಿ ಹಾಗೂ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ.

17. ಸಧ್ಯದಲ್ಲಿ ಅನುಷ್ಠಾನದಲ್ಲಿರುವ ಕಟ್ಟಡಗಳಿಗೆ ಅಂದಾಜು ವೆಚ್ಚದ ಶೇಕಡ 30ನ್ನು ಮೊದಲು ಒದಗಿಸಿಕೊಂಡು ನಂತರವೇ ಉಳಿಕೆ ಅನುದಾನವನ್ನು ಹೊಸ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು.
18. ಅನುದಾನವನ್ನು ಬಿಡುಗಡೆ ಮಾಡುವಾಗ ಸಂಬಂಧಿಸಿದ ಅಧಿಕಾರಿಗಳು ನಿಗಧಿಪಡಿಸಿದ ಅಧಿಕಾರ ಪ್ರತ್ಯಾಯೋಜನೆ ಮಿತಿಯೊಳಗೆ ಹಣ ಬಿಡುಗಡೆ ಬಗ್ಗೆ ಕ್ರಮ ವಹಿಸತಕ್ಕದ್ದು. ಅಧಿಕಾರ ಪ್ರತ್ಯಾಯೋಜನೆ ಮೀರಿದ ಸಂದರ್ಭದಲ್ಲಿ ಮುಂದುವರಿಕೆ ಕಾರ್ಯಕ್ರಮಗಳ ಮಂಜೂರಾತಿ ಆದೇಶದ ಮೇಲೆಯೇ ಹಣವನ್ನು ಖಜಾನೆಯಿಂದ ಸೆಳೆಯಬಾರದು. ಇದಕ್ಕಾಗಿ ಸರ್ಕಾರದಿಂದ ಹಣ ಬಿಡುಗಡೆ ಆದೇಶವನ್ನು ಪ್ರತ್ಯೇಕವಾಗಿ ಪಡೆಯತಕ್ಕದ್ದು.

**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ.**

ಗೆ:

1. ಸರ್ಕಾರದ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಗೌರವಗಳೊಂದಿಗೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6. ನಿರ್ದೇಶಕರು ಪ್ರೌಢ/ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
7. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
8. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. 100 ಅಡಿ ವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು. 560 085.
9. ನಿರ್ದೇಶಕರು(ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು.
10. ಸಹ ನಿರ್ದೇ ಶಕರು, ಎಸ್.ಎಸ್.ಎ. ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು.
11. ಸಹ ನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
12. ಸಹ ನಿರ್ದೇಶಕರು(ಶಾಲಾ ಶಿಕ್ಷಣ) ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
13. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಸೆಂಟ್ರಲ್ ಕಾಲೇಜು ಕಟ್ಟಡ, ಬೆಂಗಳೂರು.
14. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
15. ಖಜಾನಾಧಿಕಾರಿಗಳು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
16. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಬೆಂಗಳೂರು.
17. ಶಾಖಾಧಿಕಾರಿಗಳು,ಆದ್ಯರ್ಪಣೆ ಮತ್ತು ಮರುಹೊಂದಾಣಿಕೆ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು.
18. ಉಪನಿರ್ದೇಶಕರು, ಎನ್.ಎಂ.ಸಿ. ಖನಿಜಭವನ, ಬೆಂಗಳೂರು.
19. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು.
20. ಕಛೇರಿ ಪ್ರತಿ.